# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿಯ ದಿನಾಂಕ:18–1–2012ರಂದು ನಡೆದ ಸಭೆಯ ನಡವಳಿಗಳು:–

| ಹಾಜರಿದ್ದ ಶ್ರೀಯುತರ ಸದಸ್ಯರ ಹೆಸರು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀ.ಎ.ಎಲ್.ಶಿವಕುಮಾರ್ ಅಧ್ಯಕ್ಷರು | ಕಾರ್ಯಪಾಲಕ ಅಭಿಯಂತರರು(ಕೆ.ಎಂ.ಆರ್.ಪಿ.) |
| ಶ್ರೀಮತಿ ಎಲ್.ಜೆ.ಜಯರತ್ನ ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| ಶ್ರೀ.ಕೇಶವಮೂರ್ತಿ ಸದಸ್ಯರು | |
| ಶ್ರೀ.ಕೆ.ಚಂದ್ರಶೇಖರ್ ಸದಸ್ಯರು | |
| ಶ್ರೀ.ಎಸ್.ಎಂ.ಮುರುಗೇಶ್ ಮೊದಲಿಯಾರ್ ಸದಸ್ಯರು | |
| ಶ್ರೀ.ಬಿ.ಎಸ್.ಮಂಜುನಾಥ ರೆಡ್ಡಿ ಸದಸ್ಯರು | |
| ಶ್ರೀ.ರಾಜೇಂದ್ರನ್ ಸದಸ್ಯರು | |

**ವಿಷಯದ ಸಂಖ್ಯೆ:02/2011–12**

ಅಧ್ಯಕ್ಷರು ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ಹಿಂದಿನ ಸಬೆಯಲ್ಲಿ ಸೂಚಿಸಿದಂತೆ ಮಾಹಿತಿಗಳನ್ನು ಒದಗಿಸಿರುವ ಬಗ್ಗೆ ಮಾಹಿತಿಗಳನ್ನು ಒದಗಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಕಾರ್ಯಪಾಲಕ ಅಭಿಯಂತರರು(ಕೆ.ಎಂ.ಆರ್.ಪಿ.)ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಅಧ್ಯಕ್ಷರು ಸೂಚಿಸಿದಂತೆ 2006–07ನೇ ಸಾಲಿನ ಕಂಡಿಕೆಳಿಗೆ ವರದಿಯನ್ನು ತಯಾರಿಸಿ ಕಳುಹಿಸಿದ್ದು, ಸದರಿ ಕಡತವು ಆಯುಕ್ತರ ಮೂಲಕ ಕೌನ್ಸಿಲ್ ಬಂದು ಸಮಿತಿಗೆ ಬರುತ್ತಿರುವುದಾಗಿ, ಇದೇ ರೀತಿ 2007–08 ಮತ್ತು 2008–09ನೇ ಸಾಲಿನ ಆಡಿಟ್ ಆಕ್ಷೇಪಣೆಯು ಇರುವುದಾಗಿ ಸಮಿತಿಗೆ ಮಾಹಿತಿಯನ್ನು ಒದಗಿಸಿದರು.

ಈ ಕುರಿತು ಅಧ್ಯಕ್ಷರು ಮಾತನಾಡಿ ಒಂದೇ ಯೋಜನೆಗೆ ಸಂಬಂಧಿಸಿದ ಆಡಿಟ್ ಆಕ್ಷೇಪಣೆಯು ಮೂರು ವರ್ಷದ ಆಡಿಟ್ ವರದಿಯಲ್ಲಿ ಪ್ರಸ್ತಾಪವಾಗಿರುವುದರಿಂದ ಒಂದು ವರ್ಷದ ಆಕ್ಷೇಪಣೆಗೆ ತೀರುವಳಿ ಪಡೆದಲ್ಲಿ ಇನ್ನು ಎರಡು ವರ್ಷದ ಬಾಕಿ ಉಳಿಯುತ್ತದೆ. ಆದ್ದರಿಂದ ಒಟ್ಟಾರೆ ಮೂರು ವರ್ಷದ ಆಡಿಟ್ ವರದಿಗೆ ಕಂಡಿಕೆವಾರು ಉತ್ತರಗಳನ್ನು ಕೂಡಲೇ ಸಲ್ಲಿಸುವಂತೆ ಅಭಿಯಂತರರಿಗೆ ಸೂಚಿಸುತ್ತಾ ಸಭೆಯನ್ನು ಮುಂದೂಡಲಾಯಿತು.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.